Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಶೈಕ್ಷಣಿಕ ವಿಭಾಗ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–4(184): 193 : 2026–27 ದಿನಾಂಕ:11–08–2026

## ಅಧಿಸೂಚನೆ

**ವಿಷಯ:– 2026–27ನೇ ಶೈಕ್ಷಣಿಕ ಸಾಲಿನ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಹಾಗೂ ಶುಲ್ಕ ಪಾವತಿ ಕುರಿತು.**

ಉಲ್ಲೇಖ:– ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 12-08-2026

* * * * *

2026–27ನೇ ಶೈಕ್ಷಣಿಕ ಸಾಲಿನ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸುತ್ತಾ, ಈ ಸಂಬಂಧ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಅವುಗಳನ್ನು ಅನುಸರಿಸುವಂತೆ ತಿಳಿಸಲಾಗಿದೆ.

01. ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ದ್ವಿತೀಯ ವರ್ಷಕ್ಕೆ ದಾಖಲಾಗುವ ವಿದ್ಯಾರ್ಥಿಗಳಿಂದ **2025–26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಕಟಿಸಲಾದ ದ್ವಿತೀಯ ವರ್ಷದ ಶುಲ್ಕವನ್ನು ಪಾವತಿಸಿಕೊಳ್ಳುವುದು** ಹಾಗೂ ಯಾವುದೇ ದಂಡ ಶುಲ್ಕವಿಲ್ಲದೆ **ದಿನಾಂಕ:18–08–2026 ರಿಂದ 28–08–2026ರವರೆಗೆ** ಶುಲ್ಕಗಳನ್ನು ಪಾವತಿಸಿಕೊಂಡು ಪ್ರವೇಶಾತಿ ಮಾಡಿಕೊಳ್ಳುವುದು.

02. **ದಿನಾಂಕ:29–08–2026 ರಿಂದ 31–08–2026ರವರೆಗೆ ರೂ.400/–** ದಂಡ ಶುಲ್ಕದೊಂದಿಗೆ ಪ್ರವೇಶಾತಿ ಶುಲ್ಕಗಳನ್ನು ಪಾವತಿಸಿಕೊಂಡು ಪ್ರವೇಶಾತಿ ಮಾಡಿಕೊಳ್ಳುವುದು.

03. ಪೋಷಕರ ವಾರ್ಷಿಕ ವರಮಾನ ರೂ. 2,50,000/– ಕ್ಕಿಂತ ಕಡಿಮೆ ಇರುವ **ಪ್ರವರ್ಗ–I** ರ ಗುಂಪಿನ ಹಾಗೂ ರೂ. 1,00,000/– ಗಳಿಗಿಂತ ಕಡಿಮೆ ಇರುವ 2ಎ, 2ಬಿ, 3ಎ ಹಾಗೂ 3ಬಿ ಗುಂಪಿನ ವಿದ್ಯಾರ್ಥಿಗಳು ದ್ವಿತೀಯ ವರ್ಷದ ಪ್ರವೇಶಾತಿ ಸಮಯದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಹಿಂವಿ 397 ಬಿಎಂಎಸ್ 2013 ಬೆಂಗಳೂರು, ದಿನಾಂಕ:05–09–2013 ರನ್ವಯ ಶುಲ್ಕ ಪಟ್ಟಿ ಕಾಲಂ ಸಂಖ್ಯೆ 07 ರಲ್ಲಿರುವಂತೆ ಪೂರ್ಣ ಪ್ರಮಾಣದ ಶುಲ್ಕಗಳನ್ನು ಪಾವತಿ ಮಾಡತಕ್ಕದ್ದು ಹಾಗೂ ಈ ವರ್ಗದ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗಾಗಿ ಮೇಲ್ಕಂಡ ಸರ್ಕಾರದ ಪತ್ರದನ್ವಯ ನೀಡಿರುವ ನಮೂನೆಯಲ್ಲಿ ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಘಟಕಕ್ಕೆ ವಿಭಾಗಾಧ್ಯಕ್ಷರುಗಳ ಮೂಲಕ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

**04.** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯದ ಮಿತಿಯನ್ನು ರೂ.2,50,000–00ಕ್ಕೆ ಮಿತಿಗೊಳಿಸಿದ್ದು, ಸದರಿ ವಿದ್ಯಾರ್ಥಿಗಳು ದ್ವಿತೀಯ ವರ್ಷಕ್ಕೂ ಪ್ರವೇಶಾತಿ ಸಮಯದಲ್ಲಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಶುಲ್ಕ ವಿನಾಯಿತಿಗೆ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯವು ನಿಗದಿಪಡಿಸಲಾದ ಶುಲ್ಕಗಳನ್ನು ಪಾವತಿ ಮಾಡತಕ್ಕದ್ದು ಹಾಗೂ **ಸರ್ಕಾರದ ಆದೇಶ ಸಂಖ್ಯೆ:SWD/EDU/ED3/91/2023(COM-1098854), ದಿನಾಂಕ:03–07–2023ರನ್ವಯ ಪ್ರವೇಶಾತಿ ಸಮಯದಲ್ಲಿ Lab. Fee, Library Fee, Medical Examination Fee, Registration Fee, Sports Fee, Tuition Fee** ನ್ನು **ಶುಲ್ಕ ವಿನಾಯಿತಿ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಎಸ್.ಎಸ್.ಪಿ. ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾದ 07 ದಿವಸಗಳೊಳಗೆ ವಿಶ್ವವಿದ್ಯಾಲಯಕ್ಕೆ ಪಾವತಿಸುವುದು. ಪಾವತಿಸದೇ ಇದ್ದಲ್ಲಿ ಆಯಾ ವಿಭಾಗಗಳ ವಿಭಾಗಾಧ್ಯಕ್ಷರುಗಳೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಸಲಾಗಿದೆ.**

05. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2,50,000–00 ಕ್ಕಿಂತ ಅಧಿಕ ಆದಾಯವುಳ್ಳವರು ಸಾಮಾನ್ಯ ವಿದ್ಯಾರ್ಥಿಗಳಿಗೆ ಅನ್ವಯಿಸುವ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಬೇಕು.

06. 2026–27ನೇ ಶೈಕ್ಷಣಿಕ ಸಾಲಿಗೆ K.E.A. ಮೂಲಕ ಈಗಾಗಲೇ ಪ್ರವೇಶಾತಿ ಪಡೆದಿರುವ M.B.A & M.C.A. ದ್ವಿತೀಯ ವರ್ಷದ **ಸಾಮಾನ್ಯ** ವಿದ್ಯಾರ್ಥಿಗಳಿಂದ **K.E.A. ಶುಲ್ಕ – ರೂ.30810/– + ವಿ.ವಿ. ನಿಗದಿಪಡಿಸಿರುವ ಶುಲ್ಕ ರೂ.15033/– ಒಟ್ಟು ಶುಲ್ಕ ರೂ.45843/–**ಗಳನ್ನು ಕಡ್ಡಾಯವಾಗಿ ಪಾವತಿಸಿಕೊಳ್ಳುವುದು.

07. K.E.A. ಮೂಲಕ ಈಗಾಗಲೇ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದಿರುವ M.B.A & M.C.A. ದ್ವಿತೀಯ ವರ್ಷದ **ಪ್ರವರ್ಗ-1ರ** ವಿದ್ಯಾರ್ಥಿಗಳು ಸಹ **ಸಾಮಾನ್ಯ** ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಶುಲ್ಕವನ್ನೇ – **(ರೂ.45843/-)** ಪಾವತಿಸಿಕೊಳ್ಳುವುದು.

08. ದ್ವಿತೀಯ ವರ್ಷಕ್ಕೆ ದಾಖಲಾಗುವ ಸ್ನಾತಕೋತ್ತರ ವಿದ್ಯಾರ್ಥಿಗಳು ಶುಲ್ಕವನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜ್ಞಾನ ಸಹ್ಯಾದ್ರಿ ಶಾಖೆ, ಶಂಕರಘಟ್ಟದ ಎಸ್.ಬಿ.ಐ. ಸಾಮಾನ್ಯ ಖಾತೆ QR Code** ಮೂಲಕ ಪಾವತಿಸುವಂತೆ ತಿಳಿಸಲು ಸೂಚಿಸಲಾಗಿದೆ.

09. ತೃತೀಯ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿ ದಾಖಲಾತಿ(ನಮೂನೆ 1 ರಿಂದ 9, ಶುಲ್ಕ ಪಾವತಿಸಿದ ಚಲನ್ ಜೆರಾಕ್ಸ್ ಪ್ರತಿ)ಗಳು ಹಾಗೂ ಶೈಕ್ಷಣಿಕ ವಿಭಾಗದಿಂದ ನಿಗದಿಪಡಿಸಿದ ದಿನಾಂಕಗಳಂದು ಪ್ರವೇಶಾನುಮೋದನೆ ಪಡೆಯುವುದು.

**10.** ಸಂಲಗ್ನಗೊಂಡ ಕಾಲೇಜುಗಳಲ್ಲಿನ ಪ್ರಾಂಶುಪಾಲರುಗಳು ಸ್ನಾತಕೋತ್ತರ ಕೋರ್ಸುಗಳ ದ್ವಿತೀಯ ವರ್ಷಕ್ಕೆ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳುವುದು. 2025-26ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಕಟಿಸಲಾದ ದ್ವಿತೀಯ ವರ್ಷದ ಶುಲ್ಕವನ್ನು ನಿಗದಿಪಡಿಸಿರುವಂತೆ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕಗಳನ್ನು ವಿದ್ಯಾರ್ಥಿಗಳು ನೇರವಾಗಿ ವಿಶ್ವವಿದ್ಯಾಲಯದ ಎಸ್.ಬಿ.ಐ. ಸಾಮಾನ್ಯ ಖಾತೆ **QR Code** ಮೂಲಕ ಜಮಾ ಮಾಡುವುದು ಹಾಗೂ ಸರ್ಕಾರದ ಆದೇಶ ಸಂಖ್ಯೆ:**SWD/EDU/ED3/91/2023(COM-1098854), ದಿನಾಂಕ:03-07-2023ರನ್ವಯ ಶುಲ್ಕ ವಿನಾಯಿತಿ ಪಡೆದಿರುವಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗಾಗಿ ಎಸ್.ಎಸ್.ಪಿ. ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾದ 07 ದಿವಸಗಳೊಳಗೆ ವಿಶ್ವವಿದ್ಯಾಲಯಕ್ಕೆ ಪಾವತಿಸುವುದು. ಪಾವತಿಸದೇ ಇದ್ದಲ್ಲಿ ಆಯಾ ಕಾಲೇಜಿನ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಸಲಾಗಿದೆ.**

**11. 2025-26ನೇ ಸಾಲಿನಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ (ಪ್ರಸ್ತುತ ದ್ವಿತೀಯ ವರ್ಷಕ್ಕೆ ಪ್ರವೇಶಾತಿ ಪಡೆಯುವ) ವಿದ್ಯಾರ್ಥಿಗಳು ಪ್ರವೇಶಾತಿ ವಿನಾಯಿತಿ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿ ಮಾಡಿರುವ ಬಗ್ಗೆ ಆಯಾ ವಿಭಾಗಾಧ್ಯಕ್ಷರುಗಳು ಪರಿಶೀಲಿಸಿ ಹಾಗೂ ಪಾವತಿ ಮಾಡದೇ ಇರುವ ವಿದ್ಯಾರ್ಥಿಗಳಿಂದ ವಿನಾಯಿತಿ ಶುಲ್ಕವನ್ನು ಪಾವತಿಸಿಕೊಂಡು ರಶೀದಿಯನ್ನು 2026-27ನೇ ಸಾಲಿನ ದ್ವಿತೀಯ ವರ್ಷದ ಪ್ರವೇಶಾತಿ ಅನುಮೋದನೆ ಸಮಯದಲ್ಲಿ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು.**

12. **2026-27ನೇ ಶೈಕ್ಷಣಿಕ ಸಾಲಿನ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗೆ ಪ್ರವೇಶಾತಿ ಪಡೆಯುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರವೇಶಾತಿ ವಿನಾಯಿತಿ ಶುಲ್ಕವನ್ನು ಎಸ್.ಎಸ್.ಪಿ.ಗೆ ಅರ್ಜಿ ಸಲ್ಲಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾದ ನಂತರ 07 ದಿನಗಳೊಳಗಾಗಿ ವಿನಾಯಿತಿ ನೀಡಲಾದ ಪ್ರವೇಶಾತಿ ವಿನಾಯಿತಿ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸುತ್ತೇನೆಂದು ಮುಚ್ಚಳಿಕೆಯನ್ನು ಆಯಾ ವಿಭಾಗಾಧ್ಯಕ್ಷರುಗಳು ಕಡ್ಡಾಯವಾಗಿ ಪಡೆಯುವುದು. ಮುಚ್ಚಳಿಕೆಯನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಲಾಗಿದೆ.**

**ಕುಲಸಚಿವ**
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ.

1. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು / ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ / ಶಿವಮೊಗ್ಗ / ಕಡೂರು / ಚಿಕ್ಕಮಗಳೂರು.
2. ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಕಡೂರು/ ಚಿಕ್ಕಮಗಳೂರು.
3. ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.
4. ಪ್ರಾಂಶುಪಾಲರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ.
5. ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.

--3

6. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿ ನಗರ, ಶಿವಮೊಗ್ಗ.
7. ಪ್ರಾಂಶುಪಾಲರು, ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸಾಗರ.
8. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ.
9. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ.
10. ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ.
11. ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ.
12. ಪ್ರಾಂಶುಪಾಲರು, ಕಡಿದಾಳ್ ಮಂಜಪ್ಪ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ (ಎ.ಟಿ.ಎನ್.ಸಿ. ಕಾಲೇಜು), ಶಿವಮೊಗ್ಗ.
13. ಪ್ರಾಂಶುಪಾಲರು, ಪಿ.ಇ.ಎಸ್. ಐ.ಎ.ಎಂ.ಎಸ್., ಸಾಗರ ರಸ್ತೆ, ಶಿವಮೊಗ್ಗ
14. ಪ್ರಾಂಶುಪಾಲರು, ಕೆ.ಹೆಚ್. ಶ್ರೀನಿವಾಸ್ ಸ್ನಾತಕೋತ್ತರ ಅಧ್ಯಯನ ಸಂಸ್ಥೆ, ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನ, ಸಾಗರ.
15. ಪ್ರಾಂಶುಪಾಲರು, ಕುಮದ್ವತಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ.
16. ಪ್ರಾಂಶುಪಾಲರು, ಶ್ರೀ ಕಟೀಲ್ ಅಶೋಕ್ ಪೈ ಮೇಮೊರಿಯಲ್ ಇನ್ಸಿಟ್ಯೂಟ್, ಶಿವಮೊಗ್ಗ.
17. ಪ್ರಾಂಶುಪಾಲರು, ಐ.ಡಿ.ಎಸ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು.
18. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ.
19. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು.
20. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ.
21. ಪ್ರಾಂಶುಪಾಲರು, ಎಂ.ಇ.ಎಸ್.. ಎಂ.ಎಸ್.ಪಿ.ಎಸ್. ಮಹಿಳಾ ಕಾಲೇಜು, ಚಿಕ್ಕಮಗಳೂರು.
22. ನಿರ್ದೇಶಕರು, ಯು.ಸಿ.ಸಿ.ಎಫ್. ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
23. ಆಪ್ತ ಸಹಾಯಕರು, ಕುಲಪತಿಗಳು : ಕುಲಸಚಿವರು : ಕುಲಸಚಿವರು(ಪರೀಕ್ಷಾಂಗ) : ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
24. ಕಛೇರಿ ಪ್ರತಿ

# ಮುಚ್ಚಳಿಕೆ

ಶ್ರೀ/ ಕುಮಾರಿ ______________________ (ರಿ.ನಂ ______________ )

**S/o : D/o** ______________ ... ಆದ ನಾನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವನಾಗಿದ್ದು/ಳಾಗಿದ್ದು, **2026-27**ನೇ ಶೈಕ್ಷಣಿಕ ಸಾಲಿನ ಪ್ರಥಮ / ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಯ ______________ ವಿಭಾಗಕ್ಕೆ ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ – ಇಲ್ಲಿ ಪ್ರವೇಶಾತಿಯಾಗಿ, ಪ್ರವೇಶಾತಿ ಸಮಯದಲ್ಲಿ ವಿನಾಯಿತಿ ಶುಲ್ಕದೊಂದಿಗೆ ಪ್ರವೇಶಾತಿ ಹೊಂದಿರುತ್ತೇನೆ. ಮುಂದುವರೆದು, ಎಸ್.ಎಸ್.ಪಿ.ಗೆ ಅರ್ಜಿ ಸಲ್ಲಿಸಿ, ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆಯಾದ ನಂತರ **07** ದಿನಗಳೊಳಗಾಗಿ ವಿನಾಯಿತಿ ನೀಡಲಾದ ಪ್ರವೇಶಾತಿ ವಿನಾಯಿತಿ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸುತ್ತೇನೆಂದು ಈ ಮೂಲಕ ಒಪ್ಪಿಕೊಂಡಿರುತ್ತೇನೆ. ವಿನಾಯಿತಿ ಶುಲ್ಕ ಪಾವತಿಸದೇ ಇದ್ದಲ್ಲಿ, ವಿಶ್ವವಿದ್ಯಾಲಯ ಕೈಗೊಳ್ಳಬಹುದಾದ ಮುಂದಿನ ಕ್ರಮಕ್ಕೆ ಸ್ವ-ಇಚ್ಛೆಯಿಂದ ಒಪ್ಪಿ ಈ ಮುಚ್ಚಳಿಕೆಗೆ ಸಹಿ ಮಾಡಿರುತ್ತೇನೆ.

ದಿನಾಂಕ: ತಮ್ಮ ನಂಬುಗೆಯ ವಿದ್ಯಾರ್ಥಿ/ನಿ

ಸ್ಥಳ :